ವರ್ತಿಸುತ್ತಿದ್ದ. ಅವನ ಇಂತಹ ಹುಚ್ಚು ಉತ್ಕಟತೆಯನ್ನು ಉತ್ತೇಜಿಸಲು ಲಚುಮ ಸದಾ ಸಿದ್ಧನಿರುತ್ತಿದ್ದ. ಕಾಡಿನಲ್ಲಿ ಪ್ರಾಣಿ ಪಕ್ಷಿಗಳನ್ನು ಬೇಟೆಯಾಡುವುದು ಅಪರಾಧ ಅನ್ನುವುದು ನರೇಂದ್ರಗೌಡನಿಗೆ ತಿಳಿದಿತ್ತು. ಆದರೆ ಲಚುಮ ಅಮಾಯಕ. ನರೇಂದ್ರಗೌಡ ಮೋಜಿಗಾಗಿ ಕಾಡಿನಲ್ಲಿ ಪ್ರಾಣಿಗಳನ್ನು ಬೇಟೆಯಾಡುತ್ತಿದ್ದ.

ಆಗಸದಿಂದ ಕತ್ತಲು ಸುರಿಯುವ ವೇಳೆಯಲ್ಲಿ ನರೇಂದ್ರಗೌಡ ಜೋಡು ನಳಿಕೆ ಬಂದೂಕವನ್ನು ಲಚುಮನ ಕೈಗೆಕೊಟ್ಟು ಜೀಪು ಹತ್ತಿ ಕಾಡಿನ ದಾರಿಯಲ್ಲಿ ಓಡಿಸಿದ. ಅಂಕೋಲೆ ಮತ್ತಿ ನಂದಿ ಶ್ರೀಗಂಧ ಕೊಡಸ ನೇರಲ ಬೀಟೆ ಹೊನ್ನೆ ಬಗಿನೆ ಮುತ್ತಗ ಮಾವು ಬೇವು ಮುಂತಾದ ಬೃಹತ್ವೃಕ್ಷಗಳ ಮಧ್ಯೆ ಅಂಕುಡೊಂಕಾಗಿ ಹಾದು ಹೋಗಿರುವ ಕಾಡಿನ ಕಚ್ಚಾದಾರಿಯಲ್ಲಿ ಜೀಪು ಓಡುವಾಗ ಲಚುಮ ಮೃಗಸಹಜ ತೀಕ್ಷ್ಣತೆಯಿಂದ ಮೈಯೆಲ್ಲಾ ಕಣ್ಣಾಗಿ ಸುತ್ತಲೂ ಅವಲೋಕಿಸುತ್ತಿದ್ದ. ಗಿಡದ ಚಿಕ್ಕ ರೆಂಬೆಯ ಕದಲುವಿಕೆ ಹಕ್ಕಿಪಕ್ಷಿಗಳ ಕಲರವ ಕೋತಿ ಮತ್ತಿತರ ಪ್ರಾಣಿಗಳು ಮಾಡುವ ಚಿತ್ರವಿಚಿತ್ರ ಶಬ್ದ ಮತ್ತು ಅವುಗಳ ನಿಗೂಢ ಭಾಷೆಯ ಅರಿವು ಲಚುಮನಿಗಿತ್ತು. ಒಂದು ಸ್ಥಳದಲ್ಲಿ ಜೀಪನ್ನು ನಿಲ್ಲಿಸಿ ಇಗ್ನೇಷಿಯನ್ನನು ಆಫ್ ಮಾಡಲು ಒಡೆಯನಿಗೆ ಸನ್ನೆಯ ಮೂಲಕ ಸೂಚಿಸಿದ. ಬಂದೂಕನ್ನು ನರೇಂದ್ರಗೌಡನಿಗೆ ಕೊಟ್ಟು ಟಾರ್ಚ್ ಬೆಳಗಿಸಿದ. ಟಾರ್ಚ್ ಬೆಳಕಿನಲ್ಲಿ ಮಿಕದ ಹಸಿರುಕಣ್ಣುಗಳು ಪ್ರತಿಫಲಿಸಿದವು. ನರೇಂದ್ರಗೌಡ ತಕ್ಷಣ ಗುರಿಯಿಟ್ಟು ಬಂದೂಕದ ಟ್ರಿಗರ್ ಒತ್ತಿದ. ಗುಂಡು ಹಾರಿದ ಶಬ್ದದ ತರಂಗಗಳು ಅಲ್ಲೆಲ್ಲಾ ವ್ಯಾಪಿಸಿ ವೃಕ್ಷಗಳಲ್ಲಿ ನಿದ್ರಿಸುತ್ತಿದ್ದ ಪಕ್ಷಿಗಳು ಚೆದುರಿ ಹಾರಾಡುವ ರೆಕ್ಕೆಗಳ ಸದ್ದು. ವಾನರಗಳು ರೆಂಬೆಯಿಂದ ರೆಂಬೆಗೆ ಜಿಗಿದಾಡುತ್ತಾ ಅರಚಾಡುವ ಶಬ್ದ. ಪುನಹ ಕಾಡು ನೀರವ ಮೌನ ಹೊದ್ದು ಮಲಗಿತು. ಮಿಕ ಪ್ರಾಣ ಬಿಡುವ ಸಂಕಟದಲ್ಲಿ ಕಾಲುಗಳ ಬಡಿದಾಡುವ ಶಬ್ದ. ಲಚುಮ ಮಿಕವನ್ನು ಜೀಪಿಗೆ ಎತ್ತಿಹಾಕಿದ. ಜೀಪು ಹುಲಿಕಲ್ ತೋಟದ ದಾರಿಯಲ್ಲಿ ಓಡಿತು.

ತೋಟದ ಮಾಲೀಕ ನರೇಂದ್ರಗೌಡ ಕೊಟ್ಟಿದ್ದ ಅಗ್ಗದ ಬ್ರಾಂದಿ ಕುಡಿದು ಹಿಂದಿನ ದಿನವಷ್ಟೇ ಬೇಟೆಯಾಡಿ ತಂದಿದ್ದ ಜಿಂಕೆಯ ಬಾಡೂಟ ಉಂಡು ಮಲಗಿದ್ದ ಲಚುಮನಿಗೆ ರಾತ್ರಿಯ ಒಂದ್ಹೊತ್ತಿನಲ್ಲಿ ಪಕ್ಕನೆ ಎಚ್ಚರವಾಗಿತ್ತು. ಕತ್ತಲಲ್ಲಿ ತಡಕಾಡಿದಾಗ ಹೆಂಡತಿ ದೇವೇರಿ ಪಕ್ಕದಲ್ಲಿ ಇರಲಿಲ್ಲ. ಇಂತಹ ಅವೇಳೆಯಲ್ಲಿ ಅವಳು ಎಲ್ಲಿ ಹೋಗಿದ್ದಾಳೆ ಎಂದು ಯೋಚಿಸುವಷ್ಟು ಪ್ರಜ್ಞೆ ಇರಲಿಲ್ಲ. ಕುಡಿದ ಬ್ರಾಂದಿಯ ಅಮಲು ಇನ್ನೂ ಇಳಿದಿರಲಿಲ್ಲ. ಸ್ವಲ್ಪ ಸಮಯದ ನಂತರ ದೇವೇರಿ ಸದ್ದಿಲ್ಲದೆ ಬಂದು ಮಲಗಿದಾಗ ಅರೆಪ್ರಜ್ಞಾವಸ್ಥೆಯಲ್ಲಿದ್ದ ಲಚುಮನ ಮೂಗಿಗೆ ಅತ್ತರಿನ ಪರಿಮಳದ ವಾಸನೆ ಅಡರಿತು. ಅಂತಹ ಸ್ಥಿತಿಯಲ್ಲೂ ಅವನಿಗೆ ಅದೇ ಪರಿಮಳದ ವಾಸನೆಯನ್ನು ಮತ್ತೆಲ್ಲೋ ಆಘ್ರಾಣಿಸಿದ ನೆನಪು ಆವರಿಸಿತು.

ಅಧಿಕ ಮಣ್ಣೆತ್ತಿನ ಅಮಾವಾಸ್ಯೆಗೆ ಎರಡು ದಿನ ಮೊದಲೆ ಲಚುಮ ಕಾಡಿನಲ್ಲಿ ಬೃಹತ್ ಬೀಟೆಮರದ ಚಾಚಿದ ರೆಂಬೆಯ ಒಂದೇ ಎರಿಯಲ್ಲಿ ಕಟ್ಟಿದ್ದ ಹೆಜ್ಜೇನು ಹುಟ್ಟನ್ನು ಮುರಿದು ತಂದಿದ್ದ. ಹುಟ್ಟಿನಲ್ಲಿ ತುಪ್ಪ ಹೆಚ್ಚಾಗಿಯೇ ದೊರಕಿತ್ತು. ಜೇನುಹುಟ್ಟನ್ನು ಅಲ್ಯುಮಿನಿಯಂ ಪಾತ್ರೆಯಲ್ಲಿ ಕಾಯಿಸಿ ಸಂಸ್ಕರಿಸಿ ತುಪ್ಪದಿಂದ ಮೇಣವನ್ನು ಬೇರ್ಪಡಿಸಿ ತುಪ್ಪವನ್ನು ಬಾಟಲಿಗಳಲ್ಲಿ ಶೇಖರಿಸಿ ಕೊಂಡಿದ್ದ. ಆ ದಿನ ಚಿಕ್ಕಮಗಳೂರಿನ ಪೇಟೆಯಲ್ಲಿ ಜೇನುತುಪ್ಪವನ್ನು ಹೆಚ್ಚಿನ ಬೆಲೆಗೆ ಮಾರಾಟ ಮಾಡಿ ತೋಟಕ್ಕೆ ತಡರಾತ್ರಿ ಹಿಂದಿರುಗಿ ಬಂದಿದ್ದ.

ಬಂಗಲೆಯ ಒಂದು ಕೋಣೆಯಲ್ಲಿ ದೀಪ ಬೆಳಗುತ್ತಿತ್ತು. ನರೇಂದ್ರಗೌಡ ನಿದ್ದೆಮಾಡದೆ ಎಚ್ಚರವಾಗಿದ್ದರೆ ಅವರು ಕುಡಿದು ಬಾಟಲಿಯ ತಳದಲ್ಲಿ ಉಳಿಸಿದ್ದ ಬ್ರಾಂದಿಯನ್ನೋ ವಿಸ್ಕಿಯನ್ನೋ ಕೇಳಿ ಪಡೆಯೋಣವೆಂದುಕೊಂಡ ಲಚುಮ ಸ್ವಲ್ಪವೇ ತೆರೆದಿದ್ದ ಕಿಟಕಿಯಲ್ಲಿ ಹಣಕಿ ನೋಡಿದ. ಮತ್ತೆ ಮತ್ತೆ ನೋಡಿದ. ತಲೆ ಸುತ್ತಿ ಬಂದಂತಾಯಿತು. ಲಚುಮನಿಗೆ ಯಾವ ಅನುಮಾನವೂ ಉಳಿಯಲಿಲ್ಲ.

ದೇವೇರಿಯ ಬೆತ್ತಲೆ ಮೈಯನ್ನು ನರೇಂದ್ರಗೌಡ ನೆಕ್ಕುತ್ತಿದ್ದ. ಲಚುಮನ ಬೆನ್ನು ಹುರಿಯಲ್ಲಿ ಲಾವಾರಸ ಹರಿದಾಡಿದ ಅನುಭವ.. ಮಸ್ತಿಷ್ಕದಲ್ಲಿ ಸಿಡಿಲು ಸಿಡಿದಂತಾಗಿ ಪ್ರಜ್ಞೆತಪ್ಪುವಂತೆ ಮಾಡಿತ್ತು. ಅಸಹ್ಯಬೆರೆತ ಸಿಟ್ಟು ಕರುಳ ಆಳದಲ್ಲಿ ಕಲಕಿದಂತಾಯಿತು. ಇಬ್ಬರ ಬೆತ್ತಲೆ ದೇಹಗಳು ತಳುಕು ಹಾಕಿಕೊಂಡು.. ‘ಥೂ.. ರಂಡೆ.. ಚಿನಾಲಿ.. ಹಾದರಗಿತ್ತಿ.. ಸೂಳೇಮುಂಡೆ..’ ಲಚುಮನ ನಾಲಗೆ ತುದಿಯಲ್ಲಿ ಕುಣಿಯುತ್ತಿದ್ದ ಬೈಗುಳಗಳನ್ನೆಲ್ಲ ಕಾರಿ ಬಿಡುವ ಮನಸ್ಸಾಯಿತು. ಆ ಕ್ಷಣದಲ್ಲಿ ಅವನೊಳಗೆ ಹೆಡೆ ಎತ್ತಿದ ಸಿಟ್ಟು.. ಅವರಿಬ್ಬರನ್ನೂ ಅಲ್ಲಿಯೇ ಕತ್ತಿಯಲ್ಲಿ ಕಡಿದು ದೇಹದ ಅವಯವಗಳನ್ನು ತುಂಡುತುಂಡುಮಾಡಿ ಹದ್ದು ನಾಯಿ ನರಿಗಳಿಗೆ ಚೆಲ್ಲುವ ಮನಸ್ಸಾಯಿತು. ಅಂತಹ ಸಮಯದಲ್ಲೂ ಲಚುಮ ಮನಸ್ಸಿನ ನಿಯಂತ್ರಣ ಕಳೆದುಕೊಳ್ಳಲಿಲ್ಲ. ಲಚುಮನ ಎದೆಯಲ್ಲಿ ಹೊತ್ತಿ ಉರಿಯುತ್ತಿದ್ದ ಸಿಟ್ಟು ಆಕ್ರೋಶವನ್ನು ತನಗೆ ತಾನೇ ತಹಬಂದಿಗೆ ತಂದುಕೊಂಡ. ಆದರೂ ಅವನ ಕರಾಳ ಮುಖದಲ್ಲಿ ಸಾವಿನಂಥ ಮೌನವಿತ್ತು. ಅವನ ಮೆದುಳಿನ ಪದರಗಳಲ್ಲಿ ಹೊತ್ತಿರುವ ದ್ವೇಶದ ಕಿಚ್ಚನ್ನು ಮರೆಮಾಡಿ ಸಹಜವಾಗಿರಲು ಪ್ರಯತ್ನಿಸಿದ. ಮೃಗಸಹಜ ಕ್ರೂರತೆ ಅವನ ರಕ್ತದಲ್ಲಿ ತಣ್ಣಗೆ ಹರಿಯುತ್ತಿತ್ತು. ಅದೇ ದಿನ ರಾತ್ರಿ ಪಕ್ಕದಲ್ಲಿ ಮಲಗಿದ್ದ ದೇವೇರಿ ಕೊಳೆತ ಮಾಂಸದ ಮೂಟೆಯಂತೆ ಭಾಸವಾಗಿ ಅಸಹ್ಯಪಟ್ಟುಕೊಂಡ. ನಸುಕಿನಲ್ಲಿಯೇ ಎದ್ದು ಹಾಲವಾಣದ ಗಿಡ ಸವರುವ ಕತ್ತಿ ಹಿಡಿದು ಕಾಡು ಸೇರಿ ಗೊತ್ತು ಗುರಿಯಿಲ್ಲದೆ ಅಲೆದಾಡಿದ. ಹುಲಿಕಲ್ ಕಾಡಿನ ಬಳಿ ಬಂದಾಗ ಲಚುಮನ ಆರನೇ ಇಂದ್ರಿಯ ಜಾಗ್ರತವಾಯಿತು. ತಕ್ಷಣ ಹತ್ತಿರದ ಬೃಹತ್ ಮರವೇರಿ ಕುಳಿತು ಸುತ್ತಲೂ ಕಣ್ಣು ಹಾಯಿಸಿದ. ಅವನ ಸಂದೇಹ ದಿಟವಾಗಿತ್ತು. ಕಾಡಿನ ಕಚ್ಚಾದಾರಿಗೆ ಅಡ್ಡವಾಗಿ ಬಿದ್ದಿದ್ದ ಮರದ ಪೊಟರೆಯ ಮರೆಯಲ್ಲಿ ಹುಲಿ ತನ್ನ ಎಳೆಯಮರಿಗಳಿಗೆ ಹಾಲುಣಿಸುತ್ತಾ ಮಲಗಿತ್ತು.

ಮೃಗಶಿರ ಮಳೆ ಇನ್ನೂ ಪ್ರಾರಂಭವಾಗಿರಲಿಲ್ಲ. ವೈಶಾಖ ಮಾಸದ ಆರಂಭದಲ್ಲಿ ಹೂಮಳೆ ಸುರಿದು ಕಾಫೀಗಿಡಗಳಲ್ಲಿ ಹೆಚ್ಚಿನ ಕಾಯಿಗಳು ಕಚ್ಚಿ ಹಿಡಿದಿದ್ದವು. ಈ ಬಾರಿ ಕಾಫೀ ಇಳುವರಿ ಹೆಚ್ಚಾಗಬಹುದು ಎಂಬ ಹುಮ್ಮಸ್ಸಿನಲ್ಲಿ ನರೇಂದ್ರಗೌಡ ಬೀಗುತ್ತಿದ್ದ. ಇದೇ ಲಹರಿಯಲ್ಲಿ ಕಾಡಿನಲ್ಲಿ ಶಿಕಾರಿ ಮಾಡಬೇಕು ಅನ್ನುವ ಹುಚ್ಚು ಆಸೆ ಅವನ ಮನಸ್ಸಿನಲ್ಲಿ ಆವರಿಸಿತ್ತು ತಕ್ಷಣ ಲಚುಮನಿಗೆ ಹೇಳಿ ಕಳಿಸಿದ. ಲಚುಮ ಅವಕಾಶಕ್ಕಾಗಿ ಕಾಯುತ್ತಿದ್ದ ಸಮಯ ಅದಾಗಿ ಒದಗಿ ಬಂದಿತ್ತು. ಸಂಜೆ ಸೂರ್ಯ ಪಡುವಣದ ಗುಡ್ಡಗಳ ಮರೆಯಲ್ಲಿ ಇನ್ನೂ ಇಳಿದಿರಲಿಲ್ಲ. ನರೇಂದ್ರಗೌಡ ಲೋಡ್ ಮಾಡಿದ ಜೋಡು ನಳಿಕೆ ಬಂದೂಕನ್ನು ಲಚುಮನ ಕೈಗೆ ಕೊಟ್ಟು ಕಾಡಿನ ದಾರಿಯಲ್ಲಿ ಜೀಪು ಓಡಿಸಿದ. ಅದೇನಾಯಿತೋ ನರೇಂದ್ರಗೌಡ ತನ್ನ ಬದುಕಿನ ಕಟ್ಟಕಡೆಯ ತಪ್ಪು ಮಾಡಿದ್ದ. ‘ಲಚುಮ ಈದಿನ ಹುಲಿಕಲ್ ಕಾಡಿನಲ್ಲಿ ಬೇಟೆಯಾಡುವ..’ ಅಂದು ಬಿಟ್ಟ. ಲಚುಮ ಮನಸ್ಸಿನ ನಿಯಂತ್ರಣ ಕಳೆದುಕೊಳ್ಳದೇ.. ‘ಆಯಿತು ಒಡೆಯಾ..’ ಎಂದಷ್ಟೇ ಹೇಳಿದ. ಲಚುಮನ ಎದೆಯಲ್ಲಿ ಒಂದು ತಣ್ಣನೆಯ ಕ್ರೌರ್ಯ ಹೆಪ್ಪುಗಟ್ಟುತ್ತಿತ್ತು. ಕಾಡಿನ ಕಚ್ಚಾರಸ್ತೆಗೆ ಅಡ್ಡಲಾಗಿ ಚಾಚಿದ್ದ ಬಿದಿರು ಮೆಳೆ ಲಂಟಾನ ಗಿಡಗಳ ಪೊದೆ ಅದರ ಮುಂದೆ ಗಾಳಿಗೆ ಮುರಿದು ಬಿದ್ದಿದ್ದ ಬೃಹತ್ ಮರದ ಕಾಂಡದಿಂದಾಗಿ ಜೀಪು ಮುಂದೆ ಚಲಿಸಲು ಅಡ್ಡಿಯಾಗಿತ್ತು. ನರೇಂದ್ರಗೌಡ ಜೀಪನ್ನು ರಸ್ತೆಯಲ್ಲೇ ನಿಲ್ಲಿಸಿ ಪೊದೆಗಳ ನಡುವೆ ದಾರಿ ಮಾಡಿಕೊಂಡು ಮುಂದೆ ಹೆಜ್ಜೆಹಾಕಿದ. ಒಮ್ಮೆಲೆ ಕಾಡೆಲ್ಲಾ ನಡುಗುವಂತೆ ಹುಲಿ ಗರ್ಜಿಸಿದ ಭಯಂಕರ ಶಬ್ದ.. ನರೇಂದ್ರಗೌಡ ‘ಲಚುಮಾ ಹುಲೀ..’ ಅಂದಿದ್ದಷ್ಟೇ.. ಹುಲಿ ನರೇಂದ್ರಗೌಡನ ಮೇಲೆ ಒಂದೇ ನೆಗೆತಕ್ಕೆ ಹಾರಿ ಅವನ ಗಂಟಲಿಗೆ ಬಾಯಿಹಾಕಿ ಸಿಗಿದು ಹಾಕಿತು. ಲಚುಮ ಹತ್ತಿರದ ಎತ್ತರದ ಮರವೇರಿ ಕುಳಿತು ಕೆಳಗೆ ನಡೆಯುತ್ತಿದ್ದ ಭಯಾನಕ ದೃಶ್ಯವನ್ನು ನೋಡಿ ಕಣ್ಣಣಿಸಿಕೊಳ್ಳುತ್ತಾ ವಿಕೃತ ಆನಂದ ಅನುಭವಿಸುತ್ತಿದ್ದ. ■

## ಅಡ್ಡಿ

ಚೆಂದುಳ್ಳಿ ಚೆಲುವೆ
ಮೈತುಂಬ ಒಡವೆ ಇದ್ದರೂ
ಇವಳಿಗೆ
ಮುಖದ ತುಂಬ ಮೊಡವೆ
ಚೆಲುವ
ನುಂಗಿದೆ ಅದುವೆ
ಇವಳ ಮದುವೆ!

★ ಗೀತಾ ಶಾಸ್ತ್ರಿ



ಈಶ್ವರ